## ಸಮಸ್ಯೆ ಅದಲ್ಲ

ಹೋಟೆಲಿನ ಕೊಠಡಿಯಲ್ಲಿ ತಂಗಿದ್ದ ದಂಪತಿ ಜಗಳ ಮಾಡಿಕೊಂಡರು. ಜಗಳ ವಿಪರೀತಕ್ಕೆ ಹೋದಾಗ ಹೊಡೆದಾಡಿಕೊಂಡರು. ಆಮೇಲೆ ಗಂಡ ಹೋಟೆಲ್ ಮ್ಯಾನೇಜರ್‌ಗೆ ಕರೆ ಮಾಡಿ ಕರೆಸಿಕೊಂಡ.

'ನೋಡು, ನನ್ನ ಹೆಂಡತಿ ಜಗಳ ಮಾಡಿ ಈಗ ಕಿಟಕಿಯಿಂದ ಹೊರಗೆ ಹಾರಿ ಸಾಯಲು ತಯಾರಾಗಿದ್ದಾಳೆ' ಎಂದು ಹೇಳಿದ.

'ಅದು ನಿಮ್ಮ ಕೌಟುಂಬಿಕ ಸಮಸ್ಯೆ. ನಾನೇನೂ ಮಾಡೋಕಾಗಲ್ಲ. ಅದನ್ನು ನೀವು ನೀವೇ ಬಗೆಹರಿಸಿ ಕೊಳ್ಳಿ' ಎಂದ ಮ್ಯಾನೇಜರ್.

'ನಾನು ಮಧ್ಯಸ್ಥಿಕೆ ಮಾತುಕತೆಗೆ ಕರೆ ಮಾಡಿದ್ದಲ್ಲ. ಅವಳು ಆವಾಗಿನಿಂದ ಕಿಟಕಿ ಬಾಗಿಲಿನ ಚಿಲಕ ತೆರೆಯದೆ ಕಷ್ಟಪಡುತ್ತಿದ್ದಾಳೆ. ಅದನ್ನು ಸಲೀಸಾಗಿ ತೆಗೆದುಕೊಟ್ಟು ಹೋಗು' ಎಂದ ಗಂಡ!



**ಪ. ರಾಮಕೃಷ್ಣ ಶಾಸ್ತ್ರಿ**

## ವಕೀಲಿಕೆ ಬುದ್ಧಿ

ರೈಲಿನ ಬೋಗಿಯಲ್ಲಿ ಒಬ್ಬ ವಕೀಲ ಕೂತಿದ್ದ. ಆತ ಕುಳಿತಿದ್ದ ಜಾಗದಲ್ಲಿ ಯಾರೂ ಇರಲಿಲ್ಲ. ಆಧುನಿಕ ಉಡುಗೆ ತೊಟ್ಟ ಮಹಿಳೆಯೊಬ್ಬಳು ಬಂದವಳೇ ಏಕಾಏಕಿ 'ಏಯ್ ಮಿಸ್ಟರ್, ನಿನ್ನ ಬಳಿ ಇರುವ ಹಣ, ಬಂಗಾರ, ವಾಚ್, ಮೊಬೈಲ್ ಕೊಟ್ಟರೆ ಸರಿ. ಇಲ್ಲಾಂದ್ರೆ ನೀನು ನನಗೆ ಕಿರುಕುಳ ಕೊಟ್ಟಿದ್ದಿ ಎಂದು ಬೊಬ್ಬೆ ಹಾಕಿ ಜನರನ್ನು ಸೇರಿಸುವೆ' ಎಂದು ಬೆದರಿಕೆ ಒಡ್ಡಿದಳು.

ಆಕೆಯ ಮಾತನ್ನು ಆಲಿಸಿದ ವಕೀಲ ನಿಧಾನವಾಗಿ ತನ್ನ ಸೂಟ್‌ಕೇಸ್ ತೆರೆದು ಅದರೊಳಗಿಂದ ಒಂದು ಖಾಲಿ ಹಾಳೆ ತೆಗೆದು ಆಕೆಗೆ ಕೊಡುತ್ತಾ, 'ತಾನು ಹುಟ್ಟು ಮೂಕ, ಜೊತೆಗೆ ಕಿವುಡನೂ ಆಗಿದ್ದೇನೆ. ನೀನು ಏನು ಹೇಳಬೇಕೋ ಅದನ್ನು ಈ ಕಾಗದದಲ್ಲಿ ಬರೆದುಕೊಡು' ಎಂದು ಸಂಜ್ಞೆ ಮೂಲಕ ಹೇಳಿ ಅದನ್ನು ಕೊಟ್ಟ. ಆ ಮಹಿಳೆ ಆತನಿಂದಲೇ ಪೆನ್ನು ಪಡೆದು ಸ್ವಲ್ಪ ಹೊತ್ತಿಗೆ ಮುಂಚೆ ತಾನು ಆತನಿಗೆ ಏನು ಹೇಳಿದ್ದಳೋ ಅದನ್ನೇ ನೀಟಾಗಿ ಬರೆದು ಆತನ ಕೈಗೆ ಕೊಟ್ಟಳು. ಅದನ್ನು ಪಡೆದ ವಕೀಲ ನೀಟಾಗಿ ಮಡಿಸಿ ತನ್ನ ಸೂಟ್‌ಕೇಸ್‌ನೊಳಗೆ ಇಟ್ಟವನೆ ಜೋರಾಗಿ,



ಕಲೆ: ಗಣೇಶ ಆಚಾರ್ಯ

ಆಕೆಗೆ 'ಅದೇನು ಕೂಗಬೇಕು ಅಂತಿದ್ದಿಯೋ ಈಗ ಕೂಗು. ಅದೆಲ್ಲ ಈಗ ನನ್ನ ಬಳಿ ಲಿಖಿತ ದಾಖಲೆ ಇದೆ' ಎಂದು ಹೇಳಿ ಮುಗಿಸುವಷ್ಟರಲ್ಲಿ ಆ ಮಹಿಳೆ ಅಲ್ಲಿಂದ ಮಂಗಮಾಯ.

**ಅರವಿಂದ ಜಿ. ಜೋಷಿ**